

ಎಡದಿಂದ ಬಲಕ್ಕೆ:

1. ವಿಷ ಸೇವಿಸಿದ ನಂತರವೂ ಉಳಿದದ್ದೇ ಅದರ ಹೆಚ್ಚುಗಾರಿಕೆ (3)
3. ಆ ದೇಶವನ್ನೇ ಆವರಿಸಿದೆ ನೋಡಿ ಸಾಗರ (3)
4. ನಟ ನಟಿಯರ ನಡುವೆ ಒರಟು ಮಾತಿನ ಗದ್ದಲ (3)
6. ಬೆಂಕಿಯ ನರ್ತನ, ಎಷ್ಟು ಹೆದರಿಸುವಂತಿದೆ! (4)
7. ನೆಗೆತ ಹತ್ತಿಕ್ಕಲು ಹೋದದ್ದಕ್ಕೆ ದ್ವೇಷ, ಶತ್ರುತ್ವ (4)
9. ದೇವತೆಯ ಹೆಸರಿನ ಮಧ್ಯ ಸೇವನೆ (4)
11. ಅದೇ ವಾರ್ತೆಯನ್ನೇ ಪುನಃ ಪುನಃ ಸುತ್ತಿಸುವುದೆಂದರೆ? (4)
15. ನೂರಾರು ಆಳುಗಳ ಸಾಲಿನ ಛಾಯೆ ನೋಡಿ (3)
16. ಆ ಕಚೇರಿಯ ಘಟನೆಗಳು ತುಂಬ ಆಸಕ್ತಿದಾಯಕ (3)
17. ಕಟ ಕಟ ಸದ್ದು ಮಾಡಿತು ಹುಂಜ (3)

ಮೇಲಿಂದ ಕೆಳಕ್ಕೆ:

1. ಸಾವಧಾನದಿಂದಲೇ ವರ್ತಿಸಬೇಕೆಂಬ ನಿಯಮ ಹೇರು (3)
2. ಸೇತುವೆ ಹತ್ತುವವರ ಜೊತೆಗೆ ಒಂದು ಕರಾರು (3)
3. ಶಹರವನ್ನೇ ಮೋಡಿಗೊಳಿಸಿದ ಸುಷಿರ ವಾದ್ಯ ಗೊತ್ತೇ? (3)
5. ನೋಡುಗರ ಎದುರೇ ಅಡಿ ಇಟ್ಟು ಮುಂದೆ ಸಾಗಿದರೆ? (3)
6. ರಭಸವಿರಲಿ, ಹೇಗಾದರೂ ಸಹಿಸಿಕೋ (3)
8. ನಮ್ಮೂರನ್ನೆಲ್ಲ ಚಿತ್ರಿಸುವಲ್ಲಿ ಇದೂ ಒಂದು ತರಹ (3)
10. ಪಾಲಿಗೆ ಬಂದದ್ದನ್ನೆಲ್ಲ ಕಾಪಾಡುವ ಕೆಲಸ (3)
12. ವಾಲ್ಮೀಕಿಯನ್ನು ಆವರಿಸಿದ್ದು ಅದೇ ಹುತ್ತ (3)
13. ಅಳತೆ ಮಾಡಲಿಕ್ಕೂ ಏಕೆ ಇಂಥ ಹಿಂಜರಿತ? (3)
14. ಪರದಾಟ ಏಕೆ? ಅಲ್ಲಿದೆ ನೋಡಿ ವಿಶೇಷ ಗೋಧಿ ರೊಟ್ಟಿ (3)

## ಪದಬಂಧ: 19-8-2010ರ ಉತ್ತರಗಳು

ಎಡದಿಂದ ಬಲಕ್ಕೆ:
1. ಸದಾಶಯ; 3. ಭವಾನಿ; 4. ಕ್ಷಿತಿಜ; 6. ಹಣಾಹಣಿ; 7. ಹನನ; 9. ವನಜ; 11. ದಿನಸಿ; 13. ಲಗುನ; 15. ಅಸಂಭವ; 17. ಕುಟೀರ; 18. ಸರಣಿ; 19. ಸರಸ್ವತಿ.
ಮೇಲಿಂದ ಕೆಳಕ್ಕೆ:
1. ಸನಿಹ; 2. ಯಕ್ಷಿಣಿ; 3. ಭವನ; 5. ಜಮುನ; 7. ಹಳದಿ; 8. ನಡೆಸಿ; 9. ವಕೀಲ; 10. ಜವಾನ; 12. ನರುಕು; 14. ಗುರಾಣಿ; 15. ಅರಸ; 16. ವಸತಿ.

# ಪ್ರಾಣಿ ಪ್ರಪಂಚ



## 'ಟೆಡ್ಡಿ ಬೇರ್' ಅದೇನು?

'ಟೆಡ್ಡಿ ಬೇರ್'– ಹಾಗೆಂದರೆ ಕರಡಿ ಮರಿ ಎಂದರ್ಥ. ಆದರೆ ವಾಸ್ತವದಲ್ಲಿ ಅದು ತುಂಬ ಜನಪ್ರಿಯ ಗೊಂಬೆಯೊಂದರ ಹೆಸರು. ಪುಟ್ಟ ಶರೀರ, ಗಟ್ಟಿ ತೊಗಲಿನ ಮೂಗು, ಜೂಲಂಚಿನ ದೊಡ್ಡ ಕಿವಿಗಳು. ಎಲ್ಲಕ್ಕಿಂತ ಮಿಗಿಲಾಗಿ ಮೆತ್ತನೆಯ ಮೃದುವಾದ ತುಪ್ಪಳಮಯ ಚರ್ಮ. ಒಟ್ಟಾರೆ ಅದೊಂದು ಮುದ್ದುಗೊಂಬೆ.

ವಿಪರ್ಯಾಸ ಏನೆಂದರೆ ಟೆಡ್ಡಿ ಬೇರ್ ಗೊಂಬೆಗಳು ಕರಡಿ ಮರಿಗಳನ್ನು ಹೋಲುವುದೇನಿಲ್ಲ. ಆದರೆ ವಿಸ್ಮಯ ಏನೆಂದರೆ ಕರಡಿಯೇ ಅಲ್ಲದ ಪ್ರಾಣಿಯೊಂದು ಈ ಗೊಂಬೆಗಳನ್ನು ಸಂಪೂರ್ಣ ಹೋಲುತ್ತದೆ. ಆ ಪ್ರಾಣಿ ತುಂಬ ಪರಿಚಿತ ಏನಲ್ಲ; ಅದರ ಹೆಸರು ಕೂಡ ಅಷ್ಟೇ ಅಪರಿಚಿತ.

ಈ ಸೋಜಿಗಮಯ ಪ್ರಾಣಿಯ ಹೆಸರು 'ಕೂವಾಲೇ' (ಚಿತ್ರ ನೋಡಿ). ಅದರ ವಾಸಕ್ಷೇತ್ರ ಆಸ್ಟ್ರೇಲಿಯಾ ಮಾತ್ರ. ಆ ದೇಶದಲ್ಲಿ ಕೂವಾಲೇ ಅಲ್ಲಿನ ಕಾಂಗರೂಗಳಷ್ಟೇ ವಿಖ್ಯಾತ. ಕಾಂಗರೂನಂತೆಯೇ ಕೂವಾಲೇ ಸಹ 'ಸಂಚಿಸ್ತನಿ' ವರ್ಗದ್ದೇ ಪ್ರಾಣಿ. ಹಾಗೆಂದರೆ ಅಪೂರ್ಣ ಹಂತದಲ್ಲೇ ಪ್ರಸವಗೊಂಡು, ತಾಯಿಯ ವಿಶೇಷ ಚೀಲದಲ್ಲಿ ನೆಲೆಗೊಂಡು, ಹಾಲು ಕುಡಿದು ಪ್ರೌಢವಾಗುವ ಪ್ರಾಣಿ ವಿಧ ಅದು.

ಕೂವಾಲೇ ಒಂದು ವಿಚಿತ್ರ ವಿಶಿಷ್ಟ ಪ್ರಾಣಿ. ಅದು ನೂರಕ್ಕೆ ನೂರರಷ್ಟು ವೃಕ್ಷವಾಸಿ. ನೀಲಗಿರಿ ವೃಕ್ಷಗಳ ಮೇಲಷ್ಟೇ ಅದರ ವಾಸ, ನೀಲಗಿರಿ ಎಲೆಗಳೇ ಅದರ ಆಹಾರ. ಕೂವಾಲೇ ಜೀವನವಿಡೀ ಒಮ್ಮೆಯೂ ನೆಲಕ್ಕಿಳಿಯುವುದಿಲ್ಲ. ಅದರ ಮೈಯೆಲ್ಲ ನೀಲಗಿರಿ ತೈಲದ್ದೇ ವಾಸನೆ.

ನೀಲಗಿರಿ ಎಲೆಗಳನ್ನು ಜೀರ್ಣಿಸಿಕೊಳ್ಳುವುದು ಕಷ್ಟಕರ; ಅದು ವಿಷಕರ ಕೂಡ. ನೀಲಗಿರಿ ಎಲೆಯಲ್ಲಿನ 'ಸಿನಿಯೋಲ್' ಎಂಬ ವಿಷವಸ್ತು ಪ್ರಾಣಹಾರಕ. ಆದರೆ ಕೂವಾಲೇಗೆ ಈ ಯಾವ ತ್ರಾಸವೂ ಇಲ್ಲ. ದಿನಕ್ಕೆ ಸುಮಾರು ಒಂದು ಕಿಲೋ ಎಲೆಯನ್ನು ಸೇವಿಸುವ ಕೂವಾಲೇಯ ಶರೀರದಲ್ಲಿನ ವಿಶಿಷ್ಟ ಜೀರ್ಣಾಂಗ ವ್ಯವಸ್ಥೆ ನೀಲಗಿರಿ ಸೊಪ್ಪಿನ ವಿಷಯನ್ನೆಲ್ಲ ನಿಷ್ಕ್ರಿಯಗೊಳಿಸಿ ಪೋಷಕ ಅಂಶಗಳನ್ನು ಹೀರಿಕೊಳ್ಳುತ್ತದೆ.

ಕೂವಾಲೇ ಸಂಪೂರ್ಣ ನಿರಪಾಯಕಾರೀ ಪ್ರಾಣಿ. ಆದರೆ ಅದರದು ಪ್ರಸ್ತುತ ಅಲ್ಪ ಸಂಖ್ಯೆ. ಮಿಲಿಯಗಟ್ಟಲೆ ಸಂಖ್ಯೆಯಲ್ಲಿದ್ದ ಕೂವಾಲೇಗಳನ್ನು ಚರ್ಮಕ್ಕಾಗಿ ತುಪ್ಪಟಕ್ಕಾಗಿ ಮನುಷ್ಯರು ಕೊಂದು ಕೊಂದು ಅವುಗಳ ಸಂಖ್ಯೆ ಕೆಲವೇ ಸಾವಿರಗಳಿಗಿಳಿದಿದೆ. ಈಗ ಆಸ್ಟ್ರೇಲಿಯಾದ ಎಲ್ಲ ಜನ ಭಾವನಾತ್ಮಕವಾಗಿಯೂ ಕೂವಾಲೇಯ ರಕ್ಷಣೆಗೆ ಪಣ ತೊಟ್ಟಿದ್ದಾರೆ. ಅದೇ ಈ ಪ್ರಾಣಿಗಿರುವ ರಕ್ಷೆ.

■ ಎನ್. ವಾಸುದೇವ್